ಓ.ಎಸ್ ನಂಬರ್‌ಃ 66/2016 ಡಿ ಡಬ್ಲ್ಯುಃ 1

**ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಂ.ಕೆ ವಕೀಲರಿಂದ ಃ**

ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

10.12.25

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

M.M. Appaiah

**ದಿಃ17.07.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಂ.ಕೆ ವಕೀಲರಿಂದ ಃ**

ನನ್ನ ತಂದೆಯ ಹೆಸರು ಮುತ್ತಣ್ಣ. ನನ್ನ ಅಜ್ಜನ ಹೆಸರು ಅಪ್ಪಚ್ಚ. ನನ್ನ ಅಜ್ಜನಿಗೆ ಇಬ್ಬರು ಗಂಡು ಮಕ್ಕಳು. ಅವರುಗಳೆಂದರೆ ನನ್ನ ತಂದೆ ಮತ್ತು ಅವರ ಸಹೋದರ ಅಯ್ಯಪ್ಪ. ನನ್ನ ಅಜ್ಜನಿಗೆ ಒಟ್ಟು ನಾಲ್ಕು ಜನ ಹೆಣ್ಣು ಮಕ್ಕಳು. ನನ್ನ ತಂದೆಯ ಸಹೋದರಿಯರ ಪೈಕಿ ಒಬ್ಬರು ಮಾತ್ರ ಜೀವಂತ ಇದ್ದು ಉಳಿದವರು ತೀರಿಕೊಂಡಿರುತ್ತಾರೆ. ನನ್ನ ಅಜ್ಜನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆ

M.M. Appaiah

17.07.26

1974 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡಾಗ ಅವರಿಗೆ 51 ವರ್ಷ ವಯಸ್ಸು ಆಗಿತ್ತು. ನನ್ನ ಅಜ್ಜ ಅಪ್ಪಚ್ಚ ಇವರು 1964 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮೂಗೇರ ಕುಟ್ಟಪ್ಪ ಇವರು ನಮ್ಮ ಪಕ್ಕದ ಮನೆಯವರು. ಸಾಕ್ಷಿ ಮುಂದುವರೆದು ಅವರು ನನ್ನ ಚಿಕ್ಕಪ್ಪ ಖರೀದಿ ಮಾಡಿದ ಆಸ್ತಿಯನ್ನು ಅದಲು ಬದಲು ಮಾಡಿಕೊಂಡಿದ್ದರು. ಆ ರೀತಿ ಆಸ್ತಿ ಅದಲು ಬದಲು ಮಾಡಿಕೊಂಡ ಕಾಲಕ್ಕೆ ಎಂ.ಕೆ.ಕುಟ್ಟಪ್ಪ ಇವರಿಗೆ ಯಾವ ಆಸ್ತಿ ಹೋಗಿದೆ ಎಂದರೆ ಸಾಕ್ಷಿ ಸರ್ವೆ ನಂ.37 ನೇ ಆಸ್ತಿಯನ್ನು ಅದಲು ಬದಲು ಮಾಡಿಕೊಂಡಿದ್ದು ಅದರ ನಿರ್ದಿಷ್ಟ ಹಿಸ್ಸಾ ನಂಬರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಜರೀನ ಈಕೆ ನನ್ನ ಪತ್ನಿ. ಸರ್ವೆ ನಂ.37/1 ರ 2.20 ಎಕರೆಯನ್ನು ನನ್ನ ಪತ್ನಿ ಪರವಾಗಿ ದಾನ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ದಾನ ಪತ್ರದ ಆಧಾರದ ಮೇಲೆ ಮೇಲೆ ಹೇಳಿದ ಆಸ್ತಿ ನನ್ನ ಪತ್ನಿ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಗೆ ಹಕ್ಕು ಬದಲಾವಣೆ ವಹಿ ಮತ್ತು ಆರ್.ಟಿ.ಸಿಯನ್ನು ತೋರಿಸಿ ಅದರಂತೆ ನನ್ನ ಪತ್ನಿಯ ಹೆಸರಿಗೆ ಖಾತಾ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಗಳನ್ನು ನಿಪಿ.13 ಮತ್ತು 14 ಎಂದು ಗುರುತಿಸಲಾಯಿತು. ನಾನು ನನ್ನ ಪತ್ನಿಯ ಹೆಸರಿಗೆ 2025 ರಲ್ಲಿ ದಾನಪತ್ರ ಬರೆದಿದ್ದೇನೆ. ನಾನು ದಾನ ಪತ್ರ ಬರೆದುಕೊಡುವವರಿಗೆ ಸರ್ವೆ ನಂ.37/1 ರ ಆರ್.ಟಿ.ಸಿ ನನ್ನ ಹೆಸರಿನಲ್ಲೆ ಇತ್ತು

M. M. [signature] [signature] 17-07-26

ಎಂದರೆ ಸರಿ. ಎಂ.ಕೆ.ಕುಟ್ಟಪ್ಪ ಇವರು ಕೃಷಿ ಮಾಡುತ್ತಿದ್ದ ಆಸ್ತಿ ಸರ್ವೆ ನಂ.37/1 ರ 2.20 ಎಕರೆ ಆಗಿತ್ತು ಎಂದರೆ ಸಾಕ್ಷಿ ಸರ್ವೆ ಮಾಡಿಲ್ಲ ಹಾಗಾಗಿ ಅದರ ಬಗ್ಗೆ ಗೊತ್ತಿಲ್ಲ ಆದರೆ ನನ್ನ ತಂದೆಯ ಹೆಸರಿನಲ್ಲಿ ಇದ್ದ ಸರ್ವೆ ನಂ.37/1 ರ ಖಾತೆಯನ್ನು ನನ್ನ ಹೆಸರಿಗೆ ವರ್ಗಾಯಿಸಿಕೊಂಡು ನನ್ನ ಪತ್ನಿಗೆ ದಾನ ಕೊಟ್ಟಿದ್ದೇನೆ ಎನ್ನುತ್ತಾರೆ. ಸರ್ವೆ ನಂ.37/1 ರ 2.20 ಎಕರೆ ಆಸ್ತಿಯನ್ನೆ ಎಂ.ಕೆ.ಕುಟ್ಟಪ್ಪ ಇವರು ಈ ದಾವೆ ಹೂಡುವ ಮೊದಲು ಕೃಷಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ಅದಲು ಬದಲು ಮಾಡಿಕೊಂಡಿದ್ದರು ಎಂ.ಕೆ.ಕುಟ್ಟಪ್ಪ ಇವರು ಯಾವ ಆಸ್ತಿಯನ್ನು ಉಳಿಮೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಚಿಕ್ಕಪ್ಪ ಮತ್ತು ಎಂ.ಕೆ.ಕುಟ್ಟಪ್ಪ ಇವರು ಸುಮಾರು 20 ವರ್ಷಗಳ ಹಿಂದೆ ಆಸ್ತಿಯನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ. ಅದಲು ಬದಲು ಮಾಡಿಕೊಂಡ ಸಂಬಂಧ ಎಂ.ಕೆ.ಕುಟ್ಟಪ್ಪ ಮತ್ತು ಅಯ್ಯಪ್ಪ ಇವರ ನಡುವೆ ದಾಖಲೆ ಆಗಿದೆಯಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ ಎನ್ನುತ್ತಾರೆ. ಅದಲು ಬದಲು ಮಾಡಿಕೊಂಡ ಸಂಬಂಧ ನನ್ನ ಚಿಕ್ಕಪ್ಪನ ಬಳಿ ವಿಚಾರಿಸಿಲ್ಲ. ಸರ್ವೆ ನಂ.31/1 ರ ಆಸ್ತಿ ಮತ್ತು 37/2 ರ ಆಸ್ತಿಗಳು ಒಂದೊಂಕ್ಕೊಂದು ತಾಗಿಕೊಂಡಿರುವ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.37/2 ರ ಪಶ್ಚಿಮ ಭಾಗದಲ್ಲಿ ತಾಗಿಕೊಂಡು ಸರ್ವೆ ನಂ.37/1ರ ಆಸ್ತಿ ಇದೆ ಎಂದರೆ ಸರಿ. ನಿಪಿ.1 ರ ಪ್ರಕಾರ ಸರ್ವೆ ನಂ.37/2 ರಲ್ಲಿ

17-07-26.

ಒಟ್ಟು ವಿಸ್ತೀರ್ಣ 12.00 ಎಕರೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂಬರನ್ನು ಹಿಸ್ಸಾ ಪೋಡುಗಳಾಗಿ ಸರ್ವೆ ನಂ.37/3 ರಿಂದ 37/12 ರವರಿಗೆ ಮಾಡಿಕೊಳ್ಳಲಾಗಿದೆ ಮತ್ತು ನಿಪಿ.1 ನ್ನು ಯಾವುದೇ ಸರ್ವೆ ಇಲ್ಲದೇ ವಾದಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನಿಪಿ.1 ರಲ್ಲಿ ಕಾಣುವ ಸರ್ವೆ ನಂ.37/2 ರ 12 ಎಕರೆ ಆಸ್ತಿಯ ಮೇಲೆ ಹಕ್ಕು ಸ್ವಾಧೀನ ಕೇಳುತ್ತೀರಾ ಎಂದರೆ ಸಾಕ್ಷಿ ಹಕ್ಕು ಸ್ವಾಧೀನ ಮೊದಲಿನಿಂದಲೂ ನಮ್ಮಲ್ಲೆ ಇದೆ ಆದರೆ 2011 ರಲ್ಲಿ ಸದರಿ ಆರ್.ಟಿ.ಸಿಯನ್ನು ಮಾಡಿಕೊಂಡು ಸದರಿ ಆಸ್ತಿ ತಮಗೆ ಬರಬೇಕು ಎಂದು ಹೇಳುತ್ತಿದ್ದಾರೆ ಎನ್ನುತ್ತಾರೆ. ನಿಪಿ.1 ರಲ್ಲಿ ಕಾಣಿಸಿರುವ ಆಸ್ತಿ ಪೈಕಿ ನಿಮ್ಮ ಬಳಿ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದರೆ ಸಾಕ್ಷಿ ನನ್ನ ಬಳಿ 9 ಎಕರೆ ಇದೆ ಎನ್ನುತ್ತಾರೆ. ಸರ್ವೆ ನಂ.37/2 ರ ನನ್ನ ಸ್ವಾಧೀನದಲ್ಲಿ ಇರುವ 9 ಎಕರೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ.37/9 ರ 5 ಎಕರೆ ಆಸ್ತಿ, ಉತ್ತರಕ್ಕೆ 37/12 ರ ಆಸ್ತಿ, ಪಶ್ಚಿಮಕ್ಕೆ ಸರ್ವೆ ನಂ.37/1 ರ ಆಸ್ತಿ ಮತ್ತು ದಕ್ಷಿಣಕ್ಕೆ 37/2 ಆಸ್ತಿ ಇದೆ. ಸರ್ವೆ ನಂ.37/2 ರ 9 ಎಕರೆ ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿ ನನ್ನ ಅಜ್ಜ ಅದರ ಶೇ.75 ರಷ್ಟು ಆಸ್ತಿಯನ್ನು ಖರೀದಿ ಮಾಡಿದ್ದಾರೆ ಮತ್ತು ಉಳಿದ ಶೇ.25 ರಷ್ಟು ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಮತ್ತು ಅಜ್ಜ ಖರೀದಿ ಮಾಡಿದ್ದಾರೆ ಎಂದು ಹೇಳಲಾದ ಆಸ್ತಿಗಳು ನೋಂದಣಿ ಆಗಿವೆ. ಸದರಿ ಖರೀದಿ ಪತ್ರಗಳನ್ನು ನ್ಯಾಯಾಲಯದ

M. M. Appu

17.07.26

ಮುಂದೆ ಹಾಜರು ಮಾಡಿದ್ದೇನೆ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಕ್ರಯ ಪತ್ರ ಅಲ್ಲದೇ ನನ್ನ ತಂದೆ ಅಥವಾ ನನ್ನ ಅಜ್ಜ ಸರ್ವೆ ನಂ.37/2 ರ ಪೈಕಿ ಖರೀದಿ ಮಾಡಿದರುವ ಆಸ್ತಿ ಸಂಬಂಧ ಬೇರೆ ಯಾವುದೇ ಕ್ರಯಪತ್ರ ನನ್ನ ಬಳಿ ಇಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

M.M. [signature]

[signature] 17-07-20.

(ಸಿ. ವೀರಭದ್ರಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.